<u>ಸಾಕ್ಷಿಯನ್ನು ದಿನಾಂಕ **16-06-2025** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಪಿ.ಎಲ್.ವಿ. ವಕೀಲರಿಂದ.</u>

ಗಜಾನಾನಯ್ಯ ರವರು ನನ್ನ ದೊಡ್ಡಪ್ಪ. ನನ್ನ ತಂದೆಯ ಹೆಸರು ಕೃಷ್ಣಯ್ಯ. ಗಜಾನಾನಯ್ಯ ಮತ್ತು ಕೃಷ್ಣಯ್ಯ ಮತ್ತು ಪ್ರಭಾಕರ್ ರವರು ಸಹೋದರರು ಎಂದರೆ ಸರಿ . ಅವರು ಮೂರು ಜನ ಸೇರಿಕೊಂಡು1978 ವಿಭಾಗ ಮಾಡಿಕೊಂಡು ದಾವಾ ಸ್ವತ್ತು ಗಜಾನಾನಯ್ಯ ರವರ ಪಾಲಿಗೆ ಬಂದಿರುತ್ತದೆ ಎಂದರೆಸರಿ. ಸದರಿ ಸ್ವತ್ತು ಪಿರ್ತಾಜಿತ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತು ಮಾತ್ರ ಅವರ ಪಾಲಿಗೆ ವಿಭಾಗದಲ್ಲಿ ಬಂದಿರುತ್ತದೆ ಎಂದರೆ ಸರಿ. ಶಾರದಮ್ಮರವರು ಗಜಾನನ್ಯಯವರವ ಹೆಂಡತಿ. ಅವರಿಗೆ ಒಂದು ಗಂಡು ಮತ್ತು ಹೆಣ್ಣು ಮಕ್ಕಳಿದ್ದರು ಎಂದರೆ ಸರಿ. ಗಜಾನಾನಯ್ಯರವರು ಜೀವಂತ ಇದ್ದಾಗ ಒಂದು ಬಿಲ್ ಬರೆದಿರುತ್ತಾರೆ ಅದನ್ನು ಶಿವಲಿಂಗಪ್ಪರವರು ಬರೆದಿರುತ್ತಾರೆ. ಸದರಿ ವಿಲ್ ನಿ.ಪಿ.-1 ಆಗಿರುತ್ತದೆ. ಅದರಲ್ಲಿ ಅವರು ಆಸ್ತಿ ವಿಭಾಗದಲ್ಲಿ ಬಂದಿರುತ್ತದೆ ಎಂದು ಹೇಳಿರುತ್ತಾರೆ. ನಾನು ಡಿಪ್ಲೋಮ ಮಾಡಿರುತ್ತೇನೆ. ನಿ.ಪಿ.-1 ರಲ್ಲಿ ಸದರಿ ವಿಲ್ ಇಬ್ಬರೂ ಮೃತ ಪಟ್ಟ ನಂತರ ಚಾಲ್ತಿಗೆ ಬರುತ್ತದೆ ಮತ್ತು ಸದರಿ ವಿಲ್ ಅನ್ನು ರದ್ದು ಪಡಿಸುವ ಹಕ್ಕನ್ನು ಇಟ್ಟುಕೊಂಡಿರುತ್ತೇವೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಅದರಂತೆ ಇಬ್ಬರಿಗೂ ವಿಲ್ ರದ್ದುಪಡಿಸುವ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಿನಾಂಕ 01-03-1986 ನೇ ಇಸವಿಯಲ್ಲಿ ಶಾರದಮ್ಮರವರು ನಿ.ಪಿ.-1 ಅನ್ನು ರದ್ದು ಮಾಡಿರುತ್ತೇವೆ ಎಂದು ರದ್ಧತಿ ಪತ್ರ ಬರೆದಿರುತ್ತಾರೆ ಎಂದರೆ ಸರಿ ಎನ್ನುವರು ಅದನ್ನು ನಿ.ಡಿ.-1 ಎಂದು

ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಆದರೆ ಆ ರೀತಿ ಬರೆಯುವ ಹಕ್ಕು ಅವರಿಗೆ ಇರಲಿಲ್ಲ ಎನ್ನುವರು. ಸದರಿ ದಾಖಲೆಯನ್ನು ಸಹ ಶಿವಲಿಂಗಪ್ಪರವರು ಬರೆದಿರುತ್ತಾರೆ ಎಂದರೆ ಸರಿ. ನಿ.ಪಿ.-1 ವಿಲ್ ರದ್ದು ಪಡಿಸುವ ಹಕ್ಕು ಶಾರದಮ್ಮರವರಿಗೆ ಇತ್ತು ಮತ್ತು ಆಕೆಗೆ ಸಹ ದಾವಾ ಸ್ವತ್ತನಲ್ಲಿ ಹಕ್ಕು ಇತ್ತು ಎಂದರೆ ಸರಿ . ನಿ.ಪಿ.-1 ರ ಸ್ವತ್ತು ಹೊರತುಪಡಿಸಿ ಶಾರದಮ್ಮ ರವರ ಜೀವನಕ್ಕೆ ಬೇರೆ ಯಾವುದೇ ಸ್ವತ್ತು ಇರಲಿಲ್ಲ ಎಂದರೆ ಸರಿ. ಅವರ ಜೀವನಾಂಶಕ್ಕೆ ಬಿಟ್ಟಿರುವ ಆಸ್ತಿಯಾದ ಕಾರಣ ನಿ.ಪಿ.-1 ರಲ್ಲಿ ವಿಲ್ ರದ್ದು ಮಾಡುವ ಹಕ್ಕು ನೀಡಲಾಗಿತ್ತು ಎಂದರೆ ಸರಿಯಲ್ಲ. ಶಾರದಮ್ಮರವರನ್ನು ನಾವು ಎಂದಿಗೂ ನೋಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಶಾರದಮ್ಮರವರನ್ನು ನೋಡಿಕೊಂಡ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ.

ಪ್ರತಿವಾದಿ ಶಾರದಮ್ಮ ರವರ ಸ್ವಂತ ತಮ್ಮ. ಗಜಾನಾನಯ್ಯರವರು ಮೃತಪಟ್ಟ ನಂತರ ಪ್ರತಿವಾದಿ ಅವರ ಮನೆಗೆ ಹೋಗಿ ಅಲ್ಲೇ ಉಳಿದುಕೊಂಡು ಶಾರದಮ್ಮರವರನ್ನು ಅಲ್ಲೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಮಗೆ ಪಡಿತರ ಚೀಟಿ ಇರುತ್ತದೆ ಎಂದರೆ ಸರಿ. ಶಾರದಮ್ಮರವರ ಪಡಿತರ ಚೀಟಿ ಇರುತ್ತದೆ ಎಂದರೆ ಸರಿ. ಅವರ ಪಡಿತರ ಚೀಟಿಯಲ್ಲಿ ಪ್ರತಿವಾದಿಯರ ಹೆಸರು ಇರುತ್ತದೆ ಎಂದರೆ ಸರಿ. ಸದರಿ ರೇಷನ್ ಕಾರ್ಡ್ ಅನ್ನು ನಿ.ಡಿ.-2 ಎಂದು ಗುರುತಿಸಲಾಯಿತು. ಸದರಿ ಪಡಿತರ ಚೀಟಿಯಲ್ಲಿ ಪ್ರತಿವಾದಿಯ ಮಕ್ಕಳ ಹೆಸರು ಸಹ ಇರುತ್ತದೆ ಎಂದರೆ ಸರಿ. ಮಧುಕುಮಾರ್ ಈ ದಿನ ನ್ಯಾಯಾಲಯದ ಮುಂದೆ ಇರುತ್ತಾರೆ ಎಂದರೆ ಸರಿ. ಸದರಿ ದಾಖಲೆ ಪತ್ರ ಪ್ರತಿವಾದಿ ಶಾರದಮ್ಮ ರವರ

ಜೊತೆ ಉಳಿದು ನೋಡಿಕೊಂಡಿದ್ದರು ಎಂದರೆ ಸರಿ. ಗಜಾನಾನ ಮೃತಪಟ್ಟ ನಂತರ ಎಲ್ಲಾ ದಾವಾ ಸ್ವತ್ತ ದಾಖಲೆಗಳು ಶಾರದಮ್ಮರವರ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಸದರಿ ಪಹಣಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಡಿ.-3 ಮತ್ತು 4 ಎಂದು ಗುರುತಿಸಲಾಗಿದೆ.

ಶಾರದಮ್ಮರವರು ತಮ್ಮ ಜೀವಿತ ಅವಧಿಯಲ್ಲಿ ಪ್ರತಿವಾದಿಗೆ ದಾನ ಪತ್ರ ಬರೆದಿರುತ್ತಾರೆ ಎಂದರೆ ಸರಿ. ಶಾರದಮ್ಮರವರು ಹೆಬ್ಬೆಟ್ಟು ಹಾಕುತ್ತಿದ್ದರು ಎಂದರೆ ಸರಿ. ಶಾರದಮ್ಮ ರವರು ದಿನಾಂಕ 30-04-2018 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ದಾನ ಪತ್ರ 2009 ನೇ ಇಸವಿಯಲ್ಲಿ ಬರೆಯಲಾಗಿರುತ್ತದೆ ಮತ್ತು ಅದು ಬರೆದ 9 ವರ್ಷಗಳ ನಂತರ ಮೃತಪಟ್ಟಿರುತ್ತಾರೆ ಎಂದರೆ ಸರಿ. 2009 ನೇ ಇಸವಿಯಲ್ಲಿ ದಾನ ಪತ್ರ ಮಾಡಿರುವ ವಿಚಾರನ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಶಾರದಮ್ಮರವರು ಮೃತಪಟ್ಟ ನಂತರ ಪ್ರತಿವಾದಿ ದಾನ ಪತ್ರದ ಮೇಲೆ ಖಾತೆ ವರ್ಗಾವಣೆ ಮಾಡಿಕೊಂಡಿರುವ ವಿಚಾರ ತಿಳಿದುಬಂದಿರುತ್ತದೆ. ಸದರಿ ಖಾತೆ ರದ್ದುಪಡಿಸಲು ನಾನು ಯಾವುದೇ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿ. ವಿಲ್ ರದ್ದುಪಡಿಸಿದ ಕಾರಣ ನನಗೆ 1985 ನೇ ಇಸವಿಯ ವಿಲ್ ನಲ್ಲಿ ನನಗೆ ಯಾವುದೇ ಹಕ್ಕು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಈ ದಿನದವರೆಗೂ ಸಹ ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತಿನ ಮಾಲೀಕರಾಗಿರುತ್ತಾರೆ ಮತ್ತು ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಶಾರದಮ್ಮರವರು ಪ್ರತಿವಾದಿಯರೊಂದಿಗೆ ವಾಸಮಾಡುತ್ತಿದ್ದರು ಮತ್ತು ಅಲ್ಲೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಅಕ್ರಮವಾಗಿ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ವಾಧೀನ ಹೊಂದಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲಾ ಎಂದರೆ ಸರಿ . ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ**- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**(**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ**.)**

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ.